ಪ್ರಯತ್ನಿಸುತ್ತಿದ್ದಂತೆ ಕಾರು ಮುಂದೋಡುತ್ತಿತ್ತು. ಹಳೆಯ ಘಟನೆಗಳೆಲ್ಲ ರಿವರ್ಸ್ ಗೇರಿನಲ್ಲಿ ಬಂದು ತಲೆಯನ್ನು ಆಕ್ರಮಿಸಿಕೊಳ್ಳುತ್ತಿದ್ದವು.

ಜಯಶ್ರಿ ಕಾಕು... ಅಬ್ಬಾ! ಅವರ ಜೀವನ ಪ್ರೀತಿಯ ಬಗ್ಗೆ ಎರಡು ಮಾತಿಲ್ಲ. ಪ್ರಪಂಚದಲ್ಲಿ ಸುಂದರವಾದದ್ದು, ಶ್ರೇಷ್ಠವಾದದ್ದು, ಅದ್ಭುತವಾದದ್ದೆಲ್ಲ ತಮ್ಮ ಬಳಿ ಇರಬೇಕೆಂದು ಹೇಗೆ ಹಿಂದಿನ ರಾಜ ಮಹಾರಾಜರು ಬಯಸುತ್ತಿದ್ದರೋ... ಅದರ ಒಂದೆಳೆ ಇವರಲ್ಲಿ ಹರಿದು ಬಂದಿತ್ತು. ಅಹಂಕಾರ... ಹೆಮ್ಮೆ ಮೇಳೈಸಿದ ಆಕಾರ. ತುಸು ಮೊಂಡು ಮೂಗು, ಗೋಧಿ ಬಣ್ಣ, ಅಗಲವಾದ ಕಣ್ಣುಗಳಿಂದ ಒಂದೇ ನೋಟದಲ್ಲಿ ಎದುರಿನವರನ್ನು ಅಳೆದುಬಿಡಬಲ್ಲ ಚಾಣಾಕ್ಷೆ. ನಮ್ಮ ಗುರುಕಾಕಾ ಇದ್ದುದರಲ್ಲಿಯೇ ತೃಪ್ತಿ ಪಡುವ ಜೀವ. ಅವಳು ಅದಕ್ಕೆ ತದ್ವಿರುದ್ಧ. ಆಕಾಶಕ್ಕೇ ಏಣಿ ಇಡುವ ಮಹತ್ವಾಕಾಂಕ್ಷೆಯುಳ್ಳವಳು. ಅಷ್ಟು ಲವಲವಿಕೆಯಿಂದಿದ್ದವಳನ್ನು ಕರೆದೊಯ್ಯಲು ಸಾವಿಗಾದರೂ ಹೇಗೆ ಮನಸ್ಸು ಬಂತೋ...

ನಮ್ಮ ಕಥೆ ಆರಂಭವಾಗುವದು ರಾಣೆಬೆನ್ನೂರಿನ ಹತ್ತಿರದ ಕುಪ್ಪೆಲೂರಿನಿಂದ. ಅಜ್ಜಿ ಅಜ್ಜನನ್ನು ನೋಡಿದ ನೆನಪಿಲ್ಲ. ದೊಡ್ಡ ಮನೆಯ ವಿಶಾಲವಾದ ಹಜಾರದಲ್ಲಿ ಅವರ ಫೋಟೊ ರಾರಾಜಿಸುತಿತ್ತು. ನನ್ನವ್ವ... ಸುಶೀಲಾ ಸೀದಾ ಸಾದಾ ಹೆಂಗಸು. ಅಪ್ಪ ವಿಠ್ಠಲನೂ ಅಷ್ಟೇ. ವ್ಯವಹಾರದಲ್ಲಿ ಪರಿಣತರಲ್ಲ. ಮೋಸ, ದಗಾ ಗೊತ್ತಿಲ್ಲ. ಮೈಮುರಿದು ಬೆವರು ಸುರಿಸಿ ದುಡಿಯುವದೊಂದೇ ಗೊತ್ತು. ನನಗೂ ಅದೇ ಇಳಿದು ಬಂದಿತ್ತು. ಅಣ್ಣ ಅತ್ತಿಗೆಯೆಂದರೆ ಮರ್ಯಾದೆ ಒಂದು ತೂಕ ಹೆಚ್ಚೇ ಇತ್ತೆಂದರೂ ಸರಿಯೇ. ಹತ್ತೆಕರೆ ಹೊಲದಲ್ಲಿ ಮೆಣಸಿನಕಾಯಿಯೇ ಮುಖ್ಯ ಬೆಳೆ. ಉಳಿದವನ್ನೂ ಕೊಂಚ ಬೆಳೆಯುತ್ತಿದ್ದೆವು. ಚಿಕ್ಕಂದಿನಲ್ಲಿ ಜಯಶ್ರಿ ಕಾಕು, ಗುರು ಕಾಕಾ ಊರಿಗೆ ಬರುತ್ತಿದ್ದುದು ಅಚ್ಚೊತ್ತಿದಂತೆ ನೆನಪಿದೆ. ಬಣ್ಣ, ಬಣ್ಣದ ತರಹೇವಾರಿ ಸೀರೆಯುಟ್ಟು ರಾತ್ರಿ ನೈಟಿ ತೊಟ್ಟುಕೊಳ್ಳುತ್ತಿದ್ದವರು ಅಂದಿನ ದಿನಗಳಲ್ಲಿ ನಮ್ಮ ಪಾಲಿಗೆ ಬಲು ಮಾಡರ್ನ್ ಹೆಂಗಸು. ಕಟ್ ಮಾಡಿಸಿದ ಕೂದಲನ್ನು ಕ್ಲಿಪ್ ಧರಿಸಿ ಬಿಟ್ಟುಬಿಟ್ಟಾಗ ಹಳ್ಳಿಯ ಜನರೆಲ್ಲ ತಿರುಗಿ ನೋಡುವುದಿತ್ತು. ನಾನೊಮ್ಮೆ ಅವ್ವನಿಗೆ, “ಅವ್ವಾ, ನೀನೂ ಯಾಕ ಕಾಕೂನ ಗತೆ ಕೂದಲಾ ಮಾಡಕೊಳ್ಳೂದಿಲ್ಲಾ? ಕಾಕು ಒಂದ ಮಿನಿಟಿನ್ಯಾಗ ಹಿಕ್ಕೋತಾರ. ನಿನಗ ಅರ್ಧ ತಾಸು ಬೇಕಾಗ್ತದ” ಎಂದಿದ್ದೆ. ಅವ್ವನದು ನೀಳವಾದ ಕೇಶರಾಶಿ. ಸೊಂಟದವರೆಗೂ ತೂಗಾಡುವ ನಿಡುಜಡೆ. “ಥೂ... ನಿನ್ನ. ಭಂಗಾರದಂಥಾ ಕೂದ್ಲವ ನನಗ. ಕತ್ತರಿ ಹಾಕಂತೀಯೇನು? ಅವೆಲ್ಲಾ ನಿಮ್ಮ ಕಾಕೂಗ ಇರ್ಲಿ” ಎಂದು ಬೈಸಿಕೊಂಡಿದ್ದೆ.

ತಮ್ಮ ಮದುವೆಯಾದ ಹೊಸದರಲ್ಲಿ ಕಾಕು ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ಪ್ರೈವೇಟ್ ಫೈನಾನ್ಸ್ ಕಂಪನಿಯಲ್ಲಿ ಗುಮಾಸ್ತರಾಗಿದ್ದ ಕಾಕಾನ ಸಂಬಳವೇ ಸಾಕಾಗುತ್ತಿದ್ದಾಗ ತನ್ನ ಸಂಬಳದ ಪೈಸೆ ಪೈಸೆಯನ್ನೂ ಕಾಕು ಕೂಡಿಟ್ಟುಕೊಂಡಿದ್ದರು. ಅಲ್ಲದೇ ಅವರ ತಂದೆ ತೀರಿಹೋದಾಗ ಬಂದ ದುಡ್ಡನ್ನೂ ಸೇರಿಸಿ ಬನ್ನೇರುಘಟ್ಟದ ತಪ್ಪಲಲ್ಲಿ ಒಂದು ಮನೆ ಕೊಂಡಿದ್ದರು. ಕಾಕಾನಿಗೆ ಅದು ಕೊಂಚವೂ ಇಷ್ಟವಾಗಿರಲಿಲ್ಲ. ಅವರಿಷ್ಟ ಕಾಕೂಗೆ ಮುಖ್ಯವೂ ಆಗಿರಲಿಲ್ಲ. ಬನ್ನೇರುಘಟ್ಟ ಆಗಿನ್ನೂ ಬೆಳೆಯದೇ ಹಳ್ಳಿಯಂತೇ ಇದ್ದ ಕಾಲ. ತುಸು ದೂರದಲ್ಲೇ ಕೊಳೆಗೇರಿ. ಹೀಗಾಗಿ ಮನೆ ಅಗ್ಗವಾಗೇ ದೊರಕಿತ್ತು. ಸುತ್ತೆಲ್ಲ ವಿಸ್ತಾರವಾದ ಜಾಗ. ತೆಂಗು, ಮಾವು, ಮಲ್ಲಿಗೆ, ದಾಸವಾಳ, ಪೇರಲ ಮುಂತಾದ ಗಿಡಗಳನ್ನೂ ಹಾಕಿದ್ದರು. ಅದೆಷ್ಟು ಪ್ರೀತಿಯೋ ಅದರ ಮೇಲೆ. ಕಾಕಾನಗಿಂತ ತುಸು ಜಾಸ್ತಿಯೇ ಎನ್ನಬಹುದು. ಅಲ್ಲೇ ವಾಸಿಸುತ್ತ ಮಗುವಿಗಾಗಿ ಶಬರಿಯಂತೆ ಕಾಯುತ್ತಿದ್ದಾಗ ಅಜಯ ಹುಟ್ಟಿದ. ಮದುವೆಯಾಗಿ